ಅಧ್ಯಕ್ಷರು.—ಎಷ್ಟು ಜನರು ಅರ್ಜಿಕೊಟ್ಟಿದ್ದಾರೆ. ಸೈಟು ಎಷ್ಟುಬೇಕು ಮತ್ತು ಸೈಟ್‌ಲೆಸ್ ಪೀಪಲ್ ಎಷ್ಟು ಜನರು ಇದ್ದಾರೆ ಅನ್ನುವುದೆಲ್ಲಾ ಇದರಲ್ಲಿ ಬರುವುದಿಲ್ಲ. ಇದು ಕಂದಾಯ ಇಲಾಖೆಗೆ ಬರುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ಕಂದಾಯ ಇಲಾಖೆಯ ಒಂದು ಆಧಾರದ ಮೇಲೇನೇ ಸೈಟುಗಳನ್ನು ಅಕ್ವೈರ್ ಮಾಡಿ ವಿಂಗಡಿಸಬೇಕಾಗುತ್ತದೆ. ನಾನು ಈ ಪ್ರಶ್ನೆಯನ್ನು ಏತಕ್ಕೆ ಕೇಳುತ್ತಿದ್ದೇನೆಂದರೆ ಈ ಜನರುಗಳು ಸೈಟು ಬೇಕು ಎಂದು ಸುಮಾರು ೫೦ ವರ್ಷದಿಂದಲೂ ಕೇಳುತ್ತಿದ್ದಾರೆ. ಇಲ್ಲಿಯವರೆಗೂ ಆ ಕೆಲಸ ಆಗಿಲ್ಲಾ. ಮೇಲಾಗಿ ಯಾವ ಸರ್ವೆ ನಂಬರ್ ಅನ್ನು ಪ್ರಪೋಸಲ್ ಮಾಡಿ ಯಾವುದಾದರೂ ಒಂದು ಕಾರಣದಿಂದ ರಿಜೆಕ್ಟ್ ಮಾಡುತ್ತಾರೆ. ಅಧಿಕಾರಿಗಳ ಒಂದು ತೊಂದರೆಯಿಂದಲೊ ಅಥವಾ ಊರಿನವರ ಒಂದು ತೊಂದರೆಯಿಂದಲೋ ಅವರುಗಳಿಗೆ ಸೈಟುಗಳನ್ನು ಕೊಡಲಿಕ್ಕೆ ಇದುವರೆಗೂ ಆಗಿಲ್ಲಾ ಹಿಂಜರಿಲ್ಲಾ ಸೇರಿ ಮಂತ್ರಿಗಳ ಹತ್ತಿರ ಹೋಗಿ ಅರ್ಜಿ ಕೊಟ್ಟು ಕೇಳಿದ್ದಾರೆ. ಆದರೂ ಇದುವರೆಗೂ ಅವರಿಗೆ ನಿವೇಶನ ಸಿಕ್ಕಿಲ್ಲಾ. ಪ್ರತಿ ಮೀಟಿಂಗ್‌ನಲ್ಲಿ ಕೇಳಿದರೂ ಈ ಕೆಲಸ ಆಗಿಲ್ಲಾ. ನಾನು ಈಗ ಮಾನ್ಯ ಮಂತ್ರಿಗಳನ್ನು ಕೇಳುವುದೇನೆಂದರೆ ಈ ಬಗ್ಗೆ ಏನು ಪ್ರಪೋಸಲ್ ಮಾಡಿದ್ದಾರೆ. ಎಷ್ಟು ಜಮೀನನ್ನು ಅಕ್ವೈರ್ ಮಾಡಿಕೊಂಡು ಎಷ್ಟು ಸೈಟುಗಳನ್ನು ಅವರಿಗೆ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಸತ್ಯ ಹೇಳಲಿ.

ಶ್ರೀ ಜೆ. ಹೆಚ್. ಪಟೇಲ್.—ಅವರು ಸತ್ಯ ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಹೌಸಿಂಗ್ ಮಿನಿಸ್ಟರ್‌ಗೆ ಸಂಬಂಧಪಟ್ಟದ್ದು. ನಮ್ಮ ಕಂದಾಯ ಇಲಾಖೆಯ ಕೆಲಸ ಏನು ಎಂದರೆ ಅಸಿಸ್ಟೆಂಟ್ ಕಮೀಷನರ್ ಆ ಜಮೀನನ್ನು ಅಕ್ವೈರ್ ಮಾಡುತ್ತಾರೆ ಅಷ್ಟೆ. ತಪ್ಪಾಗಿ ಹೇಳಬೇಕಾದರೆ ಸರ್ಕಾರವವು ೩ ಎಕರೆ ೨ ಗುಂಟೆ ಜಮೀನನ್ನು ಅಕ್ವೈರ್ ಮಾಡಲು ಪ್ರೊಸೀಡಿಂಗ್ಸ್ ಕೆಲಸ ನಡೆದಿದೆ. ಆದರೆ ಸೈಟ್‌ಲೆಸ್ ಎಷ್ಟು ಜನ ಇದ್ದಾರೆ. ಎಷ್ಟು ಜನರಿಗೆ ಸೈಟು ಕೊಡಬೇಕು ಅನ್ನುವ ವಿವರಗಳು ನನ್ನ ಕಡೆಯಲ್ಲಿ ಇಲ್ಲ.

ಶ್ರೀ ಟಿ. ಬಿ. ಜಯಚಂದ್ರ.—ಈ ಮೂರು ಎಕರೆಯನ್ನು ಯಾವತ್ತು ಅಕ್ವೈರ್ ಮಾಡಿ, ಈ ಬಗ್ಗೆ ಅಕ್ವಿಜಿಷನ್ ಪ್ರೊಸೀಡಿಂಗ್ಸನ್ನು ಯಾವಾಗ ಕಂಪ್ಲೀಟ್ ಮಾಡಿ ಅವರಿಗೆ ಹ್ಯಾಂಡ್‌ಓವರ್ ಮಾಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ಇನ್ನೊಂದು ಆಲ್ಟರ್‌ನೇಟಿವ್ ಜಾಗಕ್ಕಾಗಿ ನಾವು ಈಗಾಗಲೆ ಅಸಿಸ್ಟೆಂಟ್ ಕಮೀಷನರ್‌ರವರಿಗೆ ಆದೇಶ ಕೊಟ್ಟಿದ್ದೇವೆ. ಆದಷ್ಟು ಬೇಗನೆ ಅದನ್ನು ಅಕ್ವೈರ್ ಮಾಡಿ ಅದನ್ನು ಡಿಸ್ಟ್ರಿಬ್ಯೂಟ್ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

Disposal of Corporation Quarters

192 Sri P. N. Reddy. (Malur)—Will the Minister for Housing and Urban Development be pleased to state:—

(a) the procedure for disposal of 'B' type quarters belonging to Bangalore City Corporation :

(b) whether there is any procedure to dispose of such building in public auction;

c) whether Government has received any application giving on open offer to purchase the Corporation quarters No. 9 K. P. West Extension, Bangalore-20;

(d) whether it is a fact that the said house was supposed to be sold in public auction are kept as Corporation Guest House;

(e) whether it is true that inspite of an offer, the said quarters have been disposed off for a lesser price ?

SRI DHARAMSINGH, NARAYANA SINGH (Minister for Housing and Urban Development.)—

(a) (i) The quarters are sold to the occupants of the buildings at the market value; and.

(ii) In the case of Municipal employees, 25% concession on the valued cost of the building is given.

(b) No.

(c) Yes the Corporation did receive an application.

(d) No.

(e) No. The quarter, which was declined by the occupant, was sold to an other employee, at the same price that was fixed in respect of the occupant himself.

ಶ್ರೀ ಪಿ. ಎನ್. ರೆಡ್ಡಿ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ (ಅ) ಪ್ರಶ್ನೆಗೆ ಉತ್ತರವಾಗಿ ಮಾರುಕಟ್ಟೆಯ ಬೆಲೆಗೆ ಕಟ್ಟಡಗಳಲ್ಲಿ ವಾಸ ಮಾಡುತ್ತಿರುವವರಿಗೆ ವಸತಿ ಗೃಹಗಳನ್ನು ಮಾರಾಟ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಮಾರ್ಕೆಟ್ ವ್ಯಾಲ್ಯೂವನ್ನು ಯಾವ ರೀತಿ ನಿಶ್ಚಯ ಮಾಡುತ್ತಾರೆ? ಈ ಬಗ್ಗೆ ಹರಾಜು ಮಾಡುತ್ತಾರೆಯೋ ? ಅಥವಾ ಬೆಂಗಳೂರು ನಗರದಲ್ಲಿ ಮನೆಗಳ ವ್ಯಾಪಾರ ಮಾಡುತ್ತಾರಲ್ಲ ಆ ರೀತಿ ಏನಾದರೂ ವ್ಯಾಲ್ಯೂ ನಿಶ್ಚಯ ಮಾಡುತ್ತಾರೆಯೋ ? ಯಾವರೀತಿ ನಿಶ್ಚಯ ಮಾಡುತ್ತಾರೆ ?

ಅಧ್ಯಕ್ಷರು.—ನೀವು ವಕೀಲರು, ನಿಮಗೆ ಮಾರ್ಕೆಟ್ ವ್ಯಾಲ್ಯೂ ಹೇಗೆ ನಿಶ್ಚಯ ಮಾಡುತ್ತಾರೆ ಎನ್ನುವುದು ಗೊತ್ತಿಲ್ಲವೆ.

ಶ್ರೀ ಪಿ. ಎನ್. ರೆಡ್ಡಿ.—ಈ ಬಗ್ಗೆ ನನಗೆ ಮಾನ್ಯ ಮಂತ್ರಿಯವರಿಂದ ಉತ್ತರ ಬೇಕಾಗಿದೆ ಸ್ವಾಮಿ.

ಶ್ರೀ ಧರ್ಮಸಿಂಗ್.—ಯಾವ ಲೊಕಾಲಿಟಿಯಲ್ಲಿ ಆ ಮನೆಗಳು ಇದೆ, ಅಲ್ಲಿ ಅದಕ್ಕೆ ಮಾರ್ಕೆಟ್ ವ್ಯಾಲ್ಯೂ ಏನಿರಬಹುದು ಎಂಬುದನ್ನು ಅಂದಾಜು ಮಾತಿ ಅದರ ಮೇಲೆ ನಾವು ನಿಗದಿ ಮಾಡಬೇಕಾಗುತ್ತದೆ.

ಶ್ರೀ ಪಿ. ಎನ್. ರೆಡ್ಡಿ.—ಈಗ ನೀವು ಇತರೆ ಅರ್ಜಿಗಳಿಗೆ ಏನಾದರೂ ಮನೆಗಳನ್ನು ಕೊಟ್ಟಿದ್ದೀರಾ ? ಅದಕ್ಕೆ ಎಷ್ಟು ಹೆಚ್ಚಿನ ಬೆಲೆಗೆ ಆಫರ್ ಬಂದಿತ್ತು ? ಆ ಅರ್ಜಿಗಳಿಗೆ ನೀವು ಏನಾದರೂ ಮಾನ್ಯತೆಯನ್ನು ಕೊಟ್ಟಿದ್ದೀರಾ ? ಅಥವಾ ಅದನ್ನು ಕಾರ್ಪೊರೇಷನ್ ಅಧಿಕಾರಿಗಳಿಗೆ ಕೊಡಬೇಕು ಎನ್ನುವ ದೃಷ್ಟಿ ಇದ್ದರೆ ಅವರ್ಯಾರು ಅರ್ಜಿಗಳನ್ನು ಕೊಟ್ಟಿದ್ದರು ? ಯಾವ ವ್ಯಾಲ್ಯೂಗೆ ಕೊಟ್ಟಿದ್ದೀರಿ ?

ಶ್ರೀ ಧರ್ಮಸಿಂಗ್.—ಈ ಕುಮಾರಕೃಪಾದಲ್ಲಿ ೨೯ ಕಾರ್ಪೊರೇಷನ್ ಕ್ವಾರ್ಟರ್ಸ್ ಇವೆ. ಅಲ್ಲಿ ಅದನ್ನು ಆಕ್ಯುಪೆಂಟ್ಸ್‌ಗೆ ಕೊಡಬೇಕು ಎಂದು ಹೇಳಿ ಕಾರ್ಪೊರೇಷನ್‌ನವರು ಒಂದು ರೆಸೆಲ್ಯೂಷನ್ ಪಾಸು ಕಳಿಸಿದ್ದರು ಮತ್ತು ಅದಕ್ಕೆ ಒಬ್ಬರು ಅಡ್ವೋಕೇಟ್ ಕೂಡ ಅರ್ಜಿ ಹಾಕಿದ್ದರು. ಕಾರ್ಪೊರೇಷನ್ ಎಂಪ್ಲಾಯೀಸ್‌ಗೆ ಅದನ್ನು ಕೊಡಬೇಕೆಂಬ ದೃಷ್ಟಿಯಿಂದ ನಾವು ಅದನ್ನು ಅವರಿಗೆ ಕೊಟ್ಟಿದ್ದು ಆಗಿದೆ.

ಶ್ರೀ ಪಿ. ಎನ್. ರೆಡ್ಡಿ.—ಇದಕ್ಕೆ ಬೇರೆಯವರು ಸುಮಾರು ಎಷ್ಟು ಅಪ್ಲಿಕೇಷನ್‌ಗಳನ್ನು ಹಾಕಿದ್ದರು ? ಕಾರ್ಪೊರೇಷನ್ ಅಧಿಕಾರಿಗಳಿಗೆ ಕೊಟ್ಟಿದ್ದೀರಲ್ಲ ಆ ವ್ಯಾಲ್ಯೂಗೆ ಮತ್ತು ಈ ವ್ಯಾಲ್ಯೂಗೆ ಇರತಕ್ಕಂಥ ಅಂತರವೆಷ್ಟು ? ಸುಮಾರು ೫೦ ಸಾವಿರವೋ ಅಥವಾ ೧ ಲಕ್ಷವೋ, ಎಷ್ಟು ಎಂಬುದನ್ನು ಹೇಳಿ.

ಶ್ರೀ ಧರ್ಮಸಿಂಗ್.—ಒಬ್ಬರು ಅಡ್ವೋಕೇಟ್‌ರವರಿಂದ ಅರ್ಜಿ ಬಂದಿತ್ತು. ಆದರೆ ಅದನ್ನು ಕಾರ್ಪೊರೇಷನ್ ಎಂಪ್ಲಾಯೀಸ್‌ಗೆ ಕೊಡಬೇಕು ಎಂದು ಒಂದು ನಿರ್ಣಯ ಇರುವುದರಿಂದ ೨೦ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಒಬ್ಬರು ಕಾರ್ಪೊರೇಷನ್ ಅಧಿಕಾರಿಗಳಿಗೆ ಅದನ್ನು ನಾವು ಕೊಟ್ಟಿದ್ದೇವೆ.

ಶ್ರೀ ಪಿ. ಎನ್. ರೆಡ್ಡಿ.—ನೀವು ಕಾರ್ಪೊರೇಷನ್ ಅಧಿಕಾರಿಗಳಿಗೇ ಅದನ್ನು ಕೊಡಬೇಕೆಂದು ನಿಶ್ಚಯ ಮಾಡಿದ ಮೇಲೆ ಅದನ್ನು ಸ್ವಂತ ಮನೆ ಇರುವವರಿಗೂ ಕೊಟ್ಟಿದ್ದೀರಾ ? ಅಥವಾ ಸ್ವಂತ ಮನೆ ಇರುವುದನ್ನು ಪರಿಶೀಲನೆ ಮಾಡಿ ಅಂತಹವರನ್ನು ಬಿಟ್ಟು ಯಾರು ಮನೆ ಇಲ್ಲದವರು ಅಪ್ಲೈ ಮಾಡಿರುತ್ತಾರೆ ಅಂತಹವರಿಗೆ ಕೊಟ್ಟಿದ್ದೀರಾ ? ಇವತ್ತು ಯಾರಿಗೆ ಮನೆ ಕೊಟ್ಟಿದ್ದೀರಿ ಅವರಿಗೆ ಸ್ವಂತ ಮನೆ ಏನಾದರೂ ಇದೆಯೋ?

ಶ್ರೀ ಧರ್ಮಸಿಂಗ್.—ನಮಗೆ ಕಂಡುಬಂದ ಪ್ರಕಾರ ಆ ಅಧಿಕಾರಿಗಳಿಗೆ ಮನೆ ಎಲ್ಲೂ ಇಲ್ಲ, ಹಾಗೂ ಸ್ಥಳ ಕೂಡ ಇಲ್ಲ. ಅದಕ್ಕೇ ಅವರು ಅರ್ಜಿ ಹಾಕಿದರು; ಅವರಿಗೇ ನಾವು ಕೊಟ್ಟಿದ್ದಾಗಿದೆ.

ಶ್ರೀ ಪಿ. ಎನ್. ರೆಡ್ಡಿ.—ನೀವೇನು ಆ ಕಾರ್ಪೊರೇಷನ್ ಅಧಿಕಾರಿಗಳಿಗೆ ಕೊಟ್ಟಿದ್ದೀರಿ ಅವರಿಗೆ ಬೇರೆ ಕಡೆ ಒಂದು ಅಥವಾ ಎರಡು ಮನೆ ಇದೆ ಎಂದು ನಮಗೆ ಗೊತ್ತಾಗಿದೆ. ಕಾರ್ಪೊರೇಷನ್ ಅಧಿಕಾರಿಗಳಿಗೇ ಆ ಮನೆಗಳನ್ನು ಕೊಡಿ ಆದರೆ ಅದರಲ್ಲಿ ಯಾರಿಗೆ ಸ್ವಂತ ಮನೆ ಇಲ್ಲ ಅಂತಹವರಿಗೆ ಕೊಡಿ. ಆದ್ದರಿಂದ ಆ ಮನೆಗಳನ್ನು ಕಿತ್ತು ಮನೆ ಇಲ್ಲದ ಕಾರ್ಪೊರೇಷನ್ ಅಧಿಕಾರಿಗಳಿಗೆ ಕೊಡುತ್ತೀರಾ ಇದನ್ನು ನೀವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಈಗಾಗಲೇ ನಾನು ಈ ಪ್ರಶ್ನೆಗೆ ಉತ್ತರವನ್ನು ಹೇಳಿದ್ದೇನೆ. ನಮ್ಮಲ್ಲಿ ದೊರೆಯತಕ್ಕಂಥ ರೆಕಾರ್ಡ್ಸ್ ಪ್ರಕಾರ ಅವರಿಗೆ ಎಲ್ಲೂ ಸ್ವಂತ ಮನೆ ಇಲ್ಲ ಎಂದು ಇದೆ. ಬೇರೆಯಲ್ಲಾದರೂ ಅವರಿಗೆ ಮನೆ ಇದೆಯೆಂದು ಗೊತ್ತಾದರೆ ಅದರ ಬಗ್ಗೆ ನಾವು ಮುಂದೆ ಏನು ಕ್ರಮ ತೆಗೆದು ಕೊಳ್ಳಬೇಕೋ ಆ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

SRI C. M. ARUMUGHAM.—How many employees of the Corporation are the occupants of 'B' quarters and how many of them are allotted quarters ?

SRI DHARAM SINGH —I do not have that information,

SRI C. M. ARUMUGHAM.—I am asking a pertinent question. How many Corporation employees are the occupants of the 2000 quarters? How many are allotted ?

MR. SPEAKER.—Mr. Arumugham, these are houses in Kumara-Krupa Extension. There are only 29 quarters.

SRI C. M. ARUMUGHAM.—Out of these 29 quarters, how many Corporation employees are the occupants ? How many have applied and how many were allotted ? How many non-Corporation employees are allotted and whether these quarters were allotted to the non-employees of the Corporation ?

ಶ್ರೀ ಧರ್ಮಸಿಂಗ್.—ಅಲ್ಲಿರತಕ್ಕಂಥ ೨೯ ಕ್ವಾರ್ಟರ್ಸ್‌ಗಳ ಪೈಕಿ ಇಬ್ಬರು ಎಕ್ಸ್—ಕಾರ್ಪೊರೇಟರ್ಸ್‌ಗೆ ಕೂಡ ನಾವು ಕೊಟ್ಟಿದ್ದೇವೆ. ಅಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಆ ರೀತಿ ಒಂದು ನಿರ್ಣಯ ಪಾಸಾದಮೇಲೆ ನಾವು ಅದನ್ನು ಕೊಟ್ಟಿದ್ದೇವೆ.

SRI P.K. RANGANATHAN.—It is not a fact Sir.

MR. SPEAKER.—I will call you Please resume your seat.

SRI A. LAKSHMISAGAR.—While allotting these houses to the Corporation employees, are there any guidelines or criteria for allotment of these houses to the employees There are Corporation employees who have houses of their own. Yet they claim allotment of these houses because they are at very cheaper rate when compared to the market value of the properties similarly located. I want to know whether any guid lines are there for allotment of these Houses to the Corporation employees and if so, what are those guidelines.

ಶ್ರೀ ಧರ್ಮಸಿಂಗ್.—ಈ ವಿಚಾರದಲ್ಲಿ ನಾವು ಯಾವುದೇ ಗೈಡ್‌ಲೈನ್ಸ್ ಮಾಡಿಲ್ಲ. ಕಾರ್ಪೊರೇಷನ್‌ನವರು ಈ ಬಗ್ಗೆ ಒಂದು ರೆಸೆಲ್ಯೂಷನ್ ಮಾಡಿದ್ದಾರೆ. ಆದರ ಪ್ರಕಾರ ನಾವು ಕೊಟ್ಟಿದ್ದೇವೆ. ಆಲ್ಲಿ ಕುಮಾರ ಕೃಪದಲ್ಲಿ ೨೯ ಕ್ವಾರ್ಟರ್ಸ್ ಬಿದ್ದ ಅದನ್ನು ರಿಪೇರಿ ನೇ ಇಸವಿಯಲ್ಲಿ ಹೌಸಿಂಗ್ ಬೋರ್ಡ್‌ನವರು ಕಟ್ಟಿಸಿ ಕಾರ್ಪೊರೇಷನ್‌ನವರಿಗೆ ಕೊಟ್ಟಿದ್ದಾರೆ. ಮತ್ತೆ ಆಫೀಸರ್ಸ್‌ಗೆ ಎಂದು ಹೇಳಿ ೨೦೦೦ ಕ್ವಾರ್ಟರ್ಸ್‌ನ್ನು ಆಗ ಕಾರ್ಪೊರೇಷನ್ ಕಟ್ಟಿಸಿತ್ತು. ಅದು ಆಫೀಸರ್ಸ್‌ಗೆ ಆಗುವುದಿಲ್ಲವೆಂದು ತಿಳಿದು ಬಂದಮೇಲೆ ಪೌರಕಾರ್ಮಿಕರಿಗೆ ಕೊಟ್ಟಿದ್ದೇವೆ. ಅಲ್ಲಿ ಯಾರು ಆಕ್ಯುಪೆಂಟ್ಸ್ ಇದ್ದಾರೆ ಅವರಿಗೆ ಅದನ್ನು ಕೊಡಬೇಕು ಎಂದು ಕಾರ್ಪೊರೇಷನ್ ರೆಸೆಲ್ಯೂಷನ್ ಮಾಡಿದ್ದಾರೆ, ಅದರಂತೆ ನಾವು ಅವರಿಗೆ ಕೊಟ್ಟಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಆದರೆ ಸ್ವಂತ ಮನೆ ಇದ್ದವರಿಗೆ ಕಡಿಮೆ ಬೆಲೆಯಲ್ಲಿ ಈ ಮನೆಗಳನ್ನು ಕೊಡತಕ್ಕಂಥ ದ್ದು ಸರಿಯೇ ನಿವೇಶನ ಇಲ್ಲದವರಿಗೆ, ಮನೆ ಇಲ್ಲದವರಿಗೆ ಕಾರ್ಪೊರೇಷನ್‌ನಲ್ಲಿ ಹಾಲಿ ಕೆಲಸಗಾರರಾಗಿರತಕ್ಕಂತವರಿಗೆ ಈ ಮನೆಗಳನ್ನು ಕೊಡುವುದು ನ್ಯಾಯ. ಈ ರೀತಿ ಕಾರ್ಪೊರೇಷನ್‌ನಲ್ಲಿ ತೀರ್ಮಾನವಾಗಿದೆ. ಇದರ ಬಗ್ಗೆ ನನಗೂ ತಿಳಿವಳಿಕೆ ಇದೆ. ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಮನೆ ಕೊಡತಕ್ಕಂಥ ವಿಚಾರದಲ್ಲಿ ಅರ್ಜಿದಾರರಿಂದ ಒಂದು ಅಫಿಡವಿಟ್ ಆಥವಾ ಪ್ರಮಾಣಪತ್ರವನ್ನು ತೆಗೆದುಕೊಳ್ಳಬೇಕು. 'ನನಗೆ ಈ ಊರಿನಲ್ಲಿ ಎಲ್ಲೂ ಕೂಡ ಮನೆ ಇಲ್ಲ ನಿವೇಶನ ಇಲ್ಲ ಅದಕ್ಕೋಸ್ಕರ ನನಗೆ ಮನೆ ಕೊಡಿ' ಎಂದು ಹೇಳುವ ರೀತಿಯಲ್ಲಿ ಅವನಿಂದ ಅಫಿಡವಿಟ್ ತೆಗೆದು ಕೊಳ್ಳಬೇಕು.ಎರಡೆರಡು ಮನೆಗಳು ಇದ್ದವರಿಗೆ ಈ ಮನೆಗಳನ್ನು ಕೊಡುವುದು ನ್ಯಾಯವಲ್ಲ. ಈಗ ಕಾರ್ಪೊರೆಷನ್‌ನಲ್ಲಿ ಚುನಾಯಿತ ಪ್ರತಿನಿಧಿಗಳ ಸಭೆ ಇಲ್ಲದೇ ಇರುವುದರಿಂದ ತಾವು ಇದರ ಬಗ್ಗೆ ಒಂದು ತೀರ್ಮಾನವನ್ನು ತ್ವರಿತವಾಗಿ ತೆಗೆದುಕೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—ನಾವು ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ, ಅಧಿಕಾರಿಗಳಿಗೆ ಯಾರಾರಿಗೆ ಕ್ವಾರ್ಟರ್ಸ್ ಕೊಡಬೇಕಾಗಿದೆಯೋ ಅಂತಹ ಸಂದರ್ಭದಲ್ಲಿ ಯಾರಿಗೆ ಮನೆ ಆಥವಾ ನಿವೇಶನ ಇಲ್ಲ ಅಂತಹವರಿಗೆ ಅದನ್ನು ಕೊಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಅಫಿಡವಿಟ್ ಕೂಡ ತೆಗೆದುಕೊಳ್ಳಬೇಕೆಂದು ಸಾಧ್ಯವಾಗಿದೆ. ಮಾನ್ಯ ಸದಸ್ಯರು ಹೇಳಿದಹಾಗೆ ಆ ರೀತಿ ಎಲ್ಲಿ ಆಗಿದೆ ಎಂಬುದು ನನ್ನ ಗಮನಕ್ಕೆ ಬಂದರೆ ಖಂಡಿತವಾಗಿಯೂ ನಾನು ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ.

SRI C. M. ARUMUGHAM.—These houses were constructed for the Corporation employees. I also agree that it should be given to those who have no houses of their own but what made the Corporation to allot these houses to the non-employees of the Corporation.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಇವರಲ್ಲಿ ಆಗಿರುವುದು ಏನೆಂದರೆ ಆಲ್ಲಿರತಕ್ಕಂಥ ೨೯ ಕ್ವಾರ್ಟರ್ಸ್‌ನಲ್ಲಿ ಇಬ್ಬರು ಎಕ್ಸ್ ಕಾರ್ಪೊರೇಟರ್ಸ್‌ಗೆ ನಾವು ಮನೆಗಳನ್ನು ಕೊಟ್ಟಿದ್ದೇವೆ. ಇವನ್ನು ಸರ್ಕಾರ ನೇರವಾಗಿ ಮಾಡುವುದಿಲ್ಲ. ಕಾರ್ಪೊರೇಷನ್ ಆಟಾನಮಸ್ ಬಾಡಿ, ಅವರು ಈ ವಿಚಾರವನ್ನು ಪ್ರಸ್ತಾಪ ಮಾಡಿ, ಒಂದು ರೆಸೆಲ್ಯೂಷನ್ ಮಾಡಿದಮೇಲೆ ಅದನ್ನು ಕೊಟ್ಟಿದೆ.

SRI C. M. ARUMUGHAM.—What is autonomous ? After all the Commissioner is a Government Servant. They have made all illegal things What are you talking ? They want to occupy the entire Corporation area.

(INTERRUPTION)

MR. SPEAKER.—You know what is autonomous.

(INTERRUPTION)

SRI C. M. ARUMUGHAM.—Don't bring all these autonomous and all. that We know what is autonomous.

(INTERRUPTION)

MR. SPEAKER.—Mr. Arumugham, let him answer.

ಶ್ರೀ ಧರ್ಮಸಿಂಗ್.—ಯಾವಾಗಲೂ ಕಾರ್ಪೊರೇಷನ್ ಅಧಿಕಾರಿಗಳಿಗೆ ಕೊಡಬೇಕೆಂದು ಕ್ವಾರ್ಟರ್ಸ್ ಗಳನ್ನು ಕಾರ್ಪೊರೇಷನ್ ನವರು ಏನೂ ಕಟ್ಟಿಸಿಕೊಟ್ಟಿಲ್ಲ. ನಿಜವಿನೇ ಇಸವಿಯಲ್ಲಿ ಹೌಸಿಂಗ್ ಬೋರ್ಡಿನವರು ಈ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿ ಕಾರ್ಪೊರೇಷನ್ ಅಧಿಕಾರಿಗಳಿಗೆ ಅನುಕೂಲ ಮಾಡಿ ಕೊಡಬೇಕೆನ್ನುವ ದೃಷ್ಟಿಯಿಂದ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಸಮೂಹರು ೧೦-೧೫ ವರ್ಷಗಳ ಹಿಂದೆ ಕಾರ್ಪೊರೇಷನ್ ನಲ್ಲಿ ಎಲೆಕ್ಟೆಡ್ ಬಾಡಿ ಇದ್ದಾಗಲೇ ಒಂದು ರೆಜುಲೂಷನ್ ಮಾಡಿ ಸುಮಾರು ೨ ಸಾವಿರ ಮನೆಗಳನ್ನು ಪೌರಕಾರ್ಮಿಕರಿಗೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಭಾವನೆ ಬೇರೆ ರೀತಿ ಇದ್ದರೆ ನಾವು ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

SRI P. K. RANGANATH.—The quarters are not meant for employees. when the cost was at the present market rates there were applications and representations to the minister and the file was sent back to the Corporation. The file is pending before the corporation even today. when these houses are exclusively built for SCs and STs, till today no action has been taken to dispose of these quarters to them. when there is some influence immediately the houses have been disposed of. In williams Town, Frazer Town.....

MR. SPEAKER.—The question relates to 29 houses in Kumara park. Please resume your seat.

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ಹೇಳುವಂತಹ ವಿಷಯವನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

Auction Conducted by the K.E.B.

503 Sri M.G. JARTARGHAR (Hubli)—Will the Minister of State for Power be pleased to state :—

(a) whether it has come to the notice of Government that scrap aluminium and copper wires are being sold once or twice every year through auction by the Karnataka Electricity Board;